# ಎಸಿಟಿ ಫೈಬರ್‌ನೆಟ್‌ಗೆ ಚಾಲನೆ

**ಬೆಂಗಳೂರು:** ಅಟ್ರಿಯಾ ಕನ್ವರ್ಜೆನ್ಸ್ ಟೆಕ್ನಾಲಜಿಸ್ ಸಂಸ್ಥೆಯು (ಎಸಿಟಿ) ಈಗಿರುವ ಎಸಿಟಿ ಬ್ರಾಡ್‌ಬ್ಯಾಂಡ್ ಬದಲಿಗೆ ಫೈಬರ್ ತಂತ್ರಜ್ಞಾನವಿರುವ ಎಟಿಸಿ ಫೈಬರ್‌ನೆಟ್‌ನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ನೂತನ ತಂತ್ರಜ್ಞಾನ ಬಿಡುಗಡೆ ಮಾಡಿ ಮಾತನಾಡಿದ ಕಂಪೆನಿಯ ಸಿಇಒ ಬಾಲ ಮಲ್ಲಾಡಿ, ಅತಿ ವೇಗದ ಇಂಟರ್ ನೆಟ್ ಸೇವೆ ಒದಗಿಸುವ ಉದ್ದೇಶದಿಂದ ಈ ನೂತನ ಸೇವೆ ಜಾರಿಗೆ ತಂದಿದ್ದು, ಈ ಹಿಂದೆ ಇದ್ದ ಎಸಿಟಿ ಬ್ರಾಡ್ ಬ್ಯಾಂಡ್ ಸೇವೆಯನ್ನು ಈಗ ಎಸಿಟಿ ಫೈಬರ್‌ನೆಟ್ ಆಗಿ ಬದಲಾಗಿಸಲಾಗಿದೆ. ಎಟಿಸಿ ಫೈಬರ್‌ನೆಟ್‌ನಲ್ಲಿ 1,999 ರೂ.ಗಳಿಗೆ 60 ಎಂಬಿಪಿಎಸ್ ವೇಗದಲ್ಲಿ, 100 ಜಿಬಿ ಡೌನ್‌ಲೋಡ್ ಮಾಡುವ ಅವಕಾಶವಿದ್ದು, ಇದೊಂದು ಉತ್ತಮ ಇಂಟರ್ ಸೇವೆ ಆಗಲಿದೆ. ಇದು ಭಾರತದಲ್ಲಿ ಅತಿ ಕಡಿಮೆ ಬೆಲೆಗೆ ಅತಿ ವೇಗವಾದ ಸೇವೆ ಯೋಜನೆ ಇದಾಗಿದೆ ಎಂದು ತಿಳಿಸಿದರು.

ಎಸಿಟಿ ಕಂಪೆನಿಯ ನಿರ್ವಾಹಕ ನಿರ್ದೇಶಕ ಸುಂದರ್ ರಾಜ್ ಮಾತನಾಡಿ, ಭಾರತದಲ್ಲಿ ಇಂಟರ್ ನೆಟ್ ಸೇವೆ ಪಡೆಯುವರ ಸಂಖ್ಯೆ ಕಡಿಮೆ ಇದೆ. ಇದನ್ನು ಹೆಚ್ಚಿಸಲು ಎಸಿಟಿ ಫೈಬರ್ ನೆಟ್ ಉತ್ತಮ ಆಯ್ಕೆಯಾಗಿದೆ. ಭಾರತೀಯರಲ್ಲಿ ಇಂಟರ್ ನೆಟ್ ಬಳಕೆ ಕುರಿತು ಅರಿವು ಮೂಡಿಸುವುದರ ಮೂಲಕ ಶಿಕ್ಷಣ ಕ್ಷೇತ್ರದಲ್ಲಿನ ಉತ್ತಮ ಅವಕಾಶ ಕಲ್ಪಿಸಿಕೊಡುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಮುಂದಿನ ಎರಡು ವರ್ಷದಲ್ಲಿ ಒಂದು ಮಿಲಿಯನ್ ಗ್ರಾಹಕರನ್ನು ಹೊಂದುವ ಗುರಿ ಸಂಸ್ಥೆ ಇದೆ ಎಂದು ತಿಳಿಸಿದರು.